ದಿಃ31.08.2021 ರಂದು ಸಾಕ್ಷಿಗೆ ಕ್ರಮಬದ್ದವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

<u>ಮುಂದುವರಿದ ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ</u>

2. ದಿಃ02.03.2017 ರಂದು ಬೆಳಿಗ್ಗೆ 10.45 ಗಂಟೆ ಸಮಯಕ್ಕೆ ಪೊಲೀಸರು ನಮ್ಮ ಮನೆಯ ಬಳಿ ಬಂದು ಸ್ಥಳ ಪರಿಶೀಲಿಸಿದ್ದು, ನಮ್ಮ ಸಹಿ ಪಡೆದಿರುತ್ತಾರೆ. ಸದರಿ ಸಹಿ ನೋಡಿದರೆ ಗುರುತಿಸುತ್ತೇನೆ. ಸದರಿ ಪಂಚನಾಮೆಯನ್ನು ನಿ.ಪಿ.5 ಎಂದು ಗುರುತಿಸಲಾಯಿತು. ನನ್ನ ಮಗಳು ಕೊನೇಯದಾಗಿ ಹಾಕಿಕೊಂಡಿದ್ದ ಬಟ್ಟೆಗಳನ್ನು ನೋಡಿದರೆ ಗುರುತಿಸುತ್ತೇನೆ. (ಸೀಲ್ ಮಾಡಲಾದ ಪೊಟ್ಟಣಗಳಿಂದ ವಸ್ತುಗಳನ್ನು ತೆಗೆದು ಸಾಕ್ಷಿಗೆ ತೋರಿಸಲಾಯಿತು) ಸಾಕ್ಷಿದಾರರು ಒಂದು ಕೊಳೆಯಾದ ಬಿಳಿ ಬಣ್ಣದ ಕೂದಲಿರುವ ರಿಬ್ಬನ್, ಒಂದು ಕೊಳೆಯಾದ ಬಿಳಿ ಬಣ್ಣದ ರಿಬ್ಬನ್, ಒಂದು ಕೊಳೆಯಾದ ಹಸಿರು ನಿಕ್ಕರ್, ಶಾಲೆಯ ಚಿಹ್ನೆಯೊಂದಿಗೆ ಕೊಳೆಯಾದ ಬಿಳಿ ಅರ್ಧ ತೋಳಿನ ಶರ್ಟ್, ಕೊಳೆಯಾದ ಬಿಳಿ ಮತ್ತು ಕಂದು ಬಣ್ಣದ ಬಟ್ಟೆ, ಕೊಳೆಯಾದ ಕ್ರೀಮ್ ಬಣ್ಣದ ವೆಸ್ಟ್, ಕೊಳೆಯಾದ ಕಪ್ಪುಬಣ್ಣದ ಪ್ಯಾಂಟ್, ಕೆಂಪು ಬಣ್ಣದ ಹಸಿರು ನೀಲಿ ಮತ್ತು ಅರಿಶಿಣ ಪಟ್ಟಿಗಳಿರುವ ಒಂದು ಜೊತೆ ರಬ್ಬರ್ ಚಪ್ಪಲಿಗಳನ್ನು ನೋಡಿ ತನ್ನ ಮಗಳದ್ದೇ ಎಂದು ಗುರುತಿಸಿದ್ದು, ಅವುಗಳನ್ನು

ಮು.ಮಾ.1 ರಿಂದ 8 ಎಂದು ಕ್ರಮವಾಗಿ ಗುರುತಿಸಲಾಯಿತು.

3. ನಾನು ನನ್ನ ಮಗಳ ಭಾವಚಿತ್ರ ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ ಕಡತದಲ್ಲಿನ 3 ಭಾವಚಿತ್ರಗಳನ್ನು ತೋರಿಸಿ ಗುರುತಿಸಿದ್ದು, ಅವುಗಳನ್ನು ನಿ.ಪಿ.6 ರಿಂದ 8 ಎಂದು ಗುರುತಿಸಲಾಯಿತು.

4. 1 ಮತ್ತು 4 ನೇ ಆರೋಪಿತರು ಅಣ್ಣತಮ್ಮಂದಿರು. 4 ನೇ ಆರೋಪಿಗೆ 1 ವರ್ಷದಿಂದ ಪಾರ್ಶ್ವ ವಾಯು ಉಂಟಾಗಿತ್ತು. ಆರೋಪಿಗಳು ನನ್ನ ಮಗಳನ್ನು ಎತ್ತಿಕೊಂಡು ಹೋಗಿ ವಾಮಾಚಾರಕ್ಕೆ ಒಳಪಡಿಸಿದ್ದು ಹತ್ಯೆ ಮಾಡಿರುತ್ತಾರೆ. ಆರೋಪಿಗಳು 4 ನೇ ಆರೋಪಿ ಸರಿ ಹೋಗುತ್ತಾನೆಂಬ ಕಾರಣಕ್ಕೆ ನನ್ನ ಮಗಳನ್ನು ಬಲಿ ನೀಡಿರುತ್ತಾರೆ.

<u>ಪಾಟೀ ಸವಾಲುः ಆರೋಪಿಗಳ ಪರವಾಗಿ ಶ್ರೀ. ಎಂ.ಎಂ., ವಕೀಲರಿಂದः 231(2)ರಡಿಯಲ್ಲಿ ಅರ್ಜಿ ಸಲ್ಲಿಸಿದ್ದು, ಕಾಲಾವಕಾಶ ನೀಡಿ ಅನುಮತಿಸಲಾಯಿತು.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಮರುಳಸಿದ್ಧಾರಾಧ್ಯ ಹೆಚ್.ಜೆ)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು/
ವಿಶೇಷ ನ್ಯಾಯಾಧೀಶರು,
ರಾಮನಗರ.